ಶ್ರೀ ಕೆ.ಎನ್.ಸುಬ್ಬಾರೆಡ್ಡಿ(ಬಸವನಗುಡಿ): ತಾವು ಅಪಘಾತಗಳನ್ನು ತಡೆಯುವುದು ಹೇಗೆಂದರೆ, ದಾರಿಯುದ್ದಕ್ಕೂ ಬಿಯರ್ ಮತ್ತು ವೈನ್ ಅಂಗಡಿಗಳನ್ನು ತೆರೆಯಿರಿ. ಬೆಂಗಳೂರಿನಿಂದ ಮೈಸೂರು, ಹುಬ್ಬಳ್ಳಿ-ಬೆಳಗಾಂವರೆಗೂ ಎಲ್ಲಾ ರಸ್ತೆಗಳಲ್ಲಿಯೂ ಉದ್ದಕ್ಕೂ ಬಿಯರ್, ವೈನ್ ಅಂಗಡಿ ತೆರೆಯಿರಿ. ಆಗ ಅಪಘಾತಗಳನ್ನು ತಡೆಗಟ್ಟಬಹುದು. ಎಲ್ಲಾ ರಸ್ತೆಗಳಲ್ಲೂ ಅಪಘಾತಗಳು ನಡೆಯುತ್ತಿವೆ. ಅಪಘಾತಗಳನ್ನು ಏಕೆ ತಡೆಯಲಾಗುತ್ತಿಲ್ಲ? ಇನ್‌ಎಫಿಷಿಯೆಂಟ್ ಸರ್ಕಾರ. ಏಕೆಂದರೆ, ಉದ್ದಕ್ಕೂ ಡಾಬಾಗಳು ಬಿಯರ್ ಅಂಗಡಿಗಳಿವೆ, ನೀವೇನು ಮಾಡುತ್ತಿದ್ದೀರಿ? ಡ್ರೈವರ್ ಬೆಳಿಗ್ಗೆ, ಸಾಯಂಕಾಲ, ರಾತ್ರಿ ಸಮಯದಲ್ಲೂ ಕುಡಿದಿರುತ್ತಾರೆ. ಹೀಗಿರುವಾಗ, ನೀವು ಹೇಗೆ ಅಪಘಾತ ತಡೆಯುತ್ತೀರಿ? ಆದುದರಿಂದ, ಇನ್ನೂ ಹೆಚ್ಚಾಗಿ ನೀವು ಅಪಘಾತಗಳನ್ನು ಮಾಡಿ, ಜನರನ್ನು ಸಾಯಿಸಬೇಕೆಂದರೆ, ಆ ರೀತಿ ಮಾಡಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅದರ ಜೊತೆಗೆ ನೀವು ನೀರಾ ಕೇಳುತ್ತಿದ್ದೀರಿ.

ಇ) ಸದನದಲ್ಲಿ ಉತ್ತರಿಸುವ ಪ್ರಶ್ನೆ ಲಿಖಿತ ಪ್ರಶ್ನೆಯಾಗಿರುವುದು.

+ ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ನಮ್ಮ ತಾಲ್ಲೂಕಿನಲ್ಲೊಂದು ಪೋಲೀಸ್ ಸ್ಟೇಷನ್ ಇದ್ದು ಅದನ್ನು ಮದ್ದೂರು ತಾಲ್ಲೂಕಿನ ಸರ್ಕಲ್‌ಗೆ ಸೇರಿಸಿದ್ದಾರೆ. ಇದು ಕರ್ನಾಟಕದಲ್ಲಿ ಮೊದಲನೆಯದೋ, ಎರಡನೆಯದೋ ಗೊತ್ತಿಲ್ಲ. ಅದಕ್ಕೆ ಅವರು ನಿಮ್ಮ ಸರ್ಕಾರದಲ್ಲೇ ಮಾಡಿರುವುದೆಂದರು. ಯಾವ ಸರ್ಕಾರದಲ್ಲೇ ಮಾಡಿದ್ದರೂ ಸಣ್ಣ ನ್ಯೂನತೆಯನ್ನು ಬದಲಾಯಿಸುವುದಕ್ಕೆ ಎರಡು ವರ್ಷಗಳು ಬೇಕೆ? ನಾನು ಈ ವಿಚಾರದಲ್ಲಿ ಪ್ರಶ್ನೆ ಹಾಕಿದ್ದೆ. ಅದು ಅನ್‌ಸ್ಟಾರ್ಡ್ ಆಗಿ ಒಪ್ಪಿಗೆಯಾಗಿದೆ. 17ನೇ ತಾರೀಖು ಬರಬೇಕಿತ್ತು ಅದು ಬರಲಿಲ್ಲ, ಇವತ್ತೂ ಬಂದಿಲ್ಲ. ಅದು ರಾಜ್ಯದಿಂದ ಮಾಹಿತಿ ತರಿಸುವ ವಿಚಾರವಲ್ಲ. ಅದೊಂದು ಸಣ್ಣ ವಿಚಾರ. ಮಳವಳ್ಳಿ, ಮಂಡ್ಯಕ್ಕೆ ಸೇರಿದ ವಿಚಾರ. ಎಲ್ಲಾ ಮಾಹಿತಿ ಶಿಫಾರಸ್ಸಿನೊಂದಿಗೆ ನಿಮ್ಮ ಡಿಜಿಪಿ ಆಫೀಸಿಗೆ ಬಂದು 5-6 ತಿಂಗಳಾಗಿದೆ. ಆ ನ್ಯೂನತೆಯನ್ನು ಸರಿಪಡಿಸುತ್ತೀರಾ? ಯಾವಾಗ? ಅವರು ಆಶ್ವಾಸನೆ ಕೊಟ್ಟರೆ ಸಾಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಆಶ್ವಾಸನೆ ಕೊಡುವುದಕ್ಕಿಂತಲೂ ಅದನ್ನು ನೋಡಬೇಕಾಗುತ್ತದೆ. ಮದ್ದೂರು ತಾಲ್ಲೂಕಿನ ಕೆಲವು ಹಳ್ಳಿಗಳು, ಮಳವಳ್ಳಿ ತಾಲ್ಲೂಕಿನ ಕೆಲವು ಕ್ಷೇತ್ರ ಸೇರಿ ಒಂದು ಪೋಲೀಸ್ ಸ್ಟೇಷನ್ ಮಾಡಿದ್ದರು. ಈಗ ಇವರು ಹೇಳುವ ಮಳವಳ್ಳಿ ಕ್ಷೇತ್ರದವರಿಗೆ ತೊಂದರೆಯಾಗುತ್ತದೆ, ಅದಕ್ಕೆ ಪೋಲೀಸ್

ಸ್ಟೇಷನ್ ವ್ಯಾಪ್ತಿಯನ್ನು ಬದಲಾಯಿಸಬೇಕೆಂದು ಹೇಳುತ್ತಿದ್ದಾರೆ. ಯಾವುದೇ ಒಂದು ವ್ಯಾಪ್ತಿಯನ್ನು ಬದಲಾಯಿಸಬೇಕಾದರೆ ಅವರಿಗೆ ಗೊತ್ತಿರುವ ಹಾಗೆ, ನಾವು ನೋಟಿಫೈ ಮಾಡಿ, ನೋ-ಅಬ್ಜೆಕ್ಷನ್ ಕಾಲ್‌ಫಾರ್ ಮಾಡಿದ ಮೇಲೆ, ಸರಿ ಎಂದು ಕಂಡು ಬಂದ ಮೇಲೆ, ಆ ಜ್ಯೂರಿಸ್‌ಡಿಕ್ಷನ್ ಬದಲಾವಣೆ ಮಾಡಲು ಫೈನಲ್ ನೋಟಿಫಿಕೇಷನ್ ಅಥವಾ ನೋಟಿಫಿಕೇಷನ್ ಇಷ್ಯೂ ಮಾಡಬೇಕಾಗುತ್ತದೆ. ಅದನ್ನು ನಾನು ತರಿಸಿ ನೋಡುತ್ತೇನೆ, ಅಬ್ಜೆಕ್ಷನ್ ಇಲ್ಲವೆಂದರೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಸೋಮಶೇಖರ್: ಇದು ಆಡಳಿತಾತ್ಮಕವಾದ ವಿಚಾರ. ನೋಟಿಫಿಕೇಷನ್ ಅವಶ್ಯಕತೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೋಟಿಫಿಕೇಷನ್ ಆಗದೆ ಮಾಡುವುದಕ್ಕೆ ಬರುವುದಿಲ್ಲ. The affected party should also say that. ನಮಗೇನೂ ಅಬ್ಜೆಕ್ಷನ್ ಇಲ್ಲ, ನಾವು ಈ ಪೋಲೀಸ್ ಸ್ಟೇಷನ್‌ಗೆ ಹೋಗುವುದಕ್ಕೆ ಸಿದ್ದವಿದ್ದೇವೆ ಎನ್ನುವ ಬಗ್ಗೆ ನಾನು ತರಿಸಿ ನೋಡುತ್ತೇನೆ.

ಶ್ರೀ ಬಿ.ಸೋಮಶೇಖರ್: ಎಲ್ಲಾ ಶಿಫಾರಸ್ಸಿನೊಂದಿಗೆ ಅಧಿಕಾರಿಗಳು ಕಳುಹಿಸಿಕೊಟ್ಟಿದ್ದಾರೆ. ಅಧಿಕಾರಿಗಳು ಯಾವ ರೀತಿ ಅಧಿಕಾರ ನಡೆಸುತ್ತಿದ್ದಾರೆಂಬುದಕ್ಕೆ ಇದೊಂದು ನಿದರ್ಶನ. ಎರಡು ವರ್ಷಗಳ ಹಿಂದೆ ನಮ್ಮ ತಾಲ್ಲೂಕಿನ ಒಂದು ಸ್ಟೇಷನ್, ನಮ್ಮ ತಾಲ್ಲೂಕಿನ ಸರ್ಕಲ್‌ನಲ್ಲಿತ್ತು. ಮಳವಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಂದು ಸ್ಟೇಷನ್ ಮಳವಳ್ಳಿ ತಾಲ್ಲೂಕಿನ ಸರ್ಕಲ್‌ಗೆ ಸೇರಿತ್ತು. ಯಾರೋ ಎಸ್‌ಪಿ ಕೃತ್ರಿಮ ಬುದ್ಧಿಯಿಂದ ಆ ಸ್ಟೇಷನ್ ಅನ್ನು ಮದ್ದೂರು ತಾಲ್ಲೂಕಿನ ಸರ್ಕಲ್‌ಗೆ ಸೇರಿಸಿಕೊಂಡಿದ್ದಾರೆ. ಅದಕ್ಕೆ ಯಾರ ಶಿಫಾರಸ್ಸು ಬೇಡಿಕೆ ಇರಲಿಲ್ಲ ಮತ್ತು ಜನರ ಬೇಡಿಕೆ ಸಹ ಇರಲಿಲ್ಲ. ಇದನ್ನು ಬೇಕೆಂದೇ ಕಿತಾಪತಿ ಬುದ್ಧಿಯಿಂದ ಮಾಡಿದರು. ಬೇಕಾದರೆ ನಾನು ಇದನ್ನು ಸಾಬೀತು ಮಾಡುತ್ತೇನೆ. ನಮ್ಮ ಕಾಲದಲ್ಲಿಯೇ ಮಾಡಿರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಸರಿಪಡಿಸಬಾರದೆಂದು ಇದೆಯೇ? ಸರ್ಕಾರದ ಗಮನಕ್ಕೆ ತಂದು ಎರಡು ವರ್ಷಗಳಾಯಿತು. ಅಧಿಕಾರಿಗಳಿಂದ ಇವರು ಪ್ರಸ್ತಾವನೆ ತರಿಸಿದ್ದಾರೆ. ಅಧಿಕಾರಿಗಳು ಶಿಫಾರಸ್ಸು ಮಾಡಿದ್ದಾರೆ. ಇದರಿಂದ ಅನ್ಯಾಯವಾಗಿದೆ, ತೊಂದರೆಯಾಗಿದೆ, ಇದನ್ನು ಸರಿಪಡಿಸಬೇಕು, ಮಳವಳ್ಳಿ ತಾಲ್ಲೂಕಿನ ಸರ್ಕಲ್ ಏನಿತ್ತು ಅಲ್ಲಿಗೇ ಕೊಡಬೇಕೆಂದು ಐಜಿಪಿ, ಎಸ್‌ಪಿ ಶಿಫಾರಸ್ಸು ಮಾಡಿದ್ದಾರೆ. ಅದನ್ನು ನಾಲ್ಕು ತಿಂಗಳಿಂದ ಡಿಜಿಪಿ ಆಫೀಸ್‌ನಲ್ಲೇ ಇಟ್ಟುಕೊಂಡಿದ್ದಾರೆ. ಅದನ್ನು ತರಿಸಿಕೊಂಡು ನೋಟಿಫಿಕೇಷನ್ ಇಷ್ಯೂ ಮಾಡಬೇಕಷ್ಟೆ. ಸಾರ್ವಜನಿಕವಾಗಿ ನೀವೇನೂ ಅವರಿಗೆ ಅಪಾರ್ಚುನಿಟಿ ಕೊಡಬೇಕಾಗಿಲ್ಲ. ಇದೊಂದು ಸಣ್ಣ ವಿಚಾರ.

ಅಧ್ಯಕ್ಷರು: ಅದನ್ನು ತರಿಸಿ ನೋಡುತ್ತೇವೆಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ತರಿಸಿ ನೋಡುತ್ತೇನೆ.

ಈ) ಶಾಸಕರ ಹಕ್ಕು ಬಾಧ್ಯತೆ ಕುರಿತು.

ವಿಷಯ: ನ್ಯಾಯಾಂಗ ಇಲಾಖೆಯ ಕಾರ್ಯಕ್ರಮಗಳಿಗೆ ಶಾಸಕರುಗಳನ್ನು ಆಹ್ವಾನಿಸದೇ ಇರುವ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ನಿನ್ನೆ ಸದನದಲ್ಲಿ ಶಾಸಕರ ಹಕ್ಕುಬಾಧ್ಯತೆಗಳ ಬಗ್ಗೆ ಮತ್ತು ನ್ಯಾಯಾಂಗ ಇಲಾಖೆಯ ಕಾರ್ಯಕ್ರಮಗಳಿಗೆ ಶಾಸಕರನ್ನು ಕರೆಯದಿರುವ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಈ ಸದನದ ಸದಸ್ಯರ ಭಾವನೆಗಳಿಗೆ ಸ್ಪಂದಿಸಿ, ತಾವು ದೊಡ್ಡ ಮನಸ್ಸು ಮಾಡಿ, ತಾವು, ಮಾನ್ಯ ಕಾನೂನು ಸಚಿವರು ಮುಖ್ಯ ನ್ಯಾಯಾಧೀಶರನ್ನು ಭೇಟಿಯಾಗಿದ್ದಿರಿ. ಅಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಚರ್ಚೆಗಳಾಗಿರಬಹುದು ಅದರ ಬಗ್ಗೆ ಏನಾದರೂ ಹೇಳಿಕೆಯನ್ನು ಮಾನ್ಯ ಚಂದ್ರೇಗೌಡರು ಕೊಟ್ಟರೆ ನಿನ್ನೆ ನಡೆದ ಚರ್ಚೆಗೊಂದು ಪರಿಹಾರ ಸಿಗಲು ಸಾಧ್ಯವೆಂಬುದು ನನ್ನ ಭಾವನೆ.

ಅಧ್ಯಕ್ಷರು: ಅವರ ಹೇಳಿಕೆ ನಂತರ, ಯಾವುದೇ ಚರ್ಚೆ ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ತಮ್ಮ ಜೊತೆ ನಾನು ಮುಖ್ಯ ನ್ಯಾಯಾಧೀಶರನ್ನು ನಿನ್ನೆ ಭೇಟಿಯಾಗಿದ್ದೇವೆ. ಮುಕ್ತ ಮನಸ್ಸಿನಿಂದ ಚರ್ಚಿಸಿದ್ದೇವೆ. ಮುಖ್ಯ ನ್ಯಾಯಾಧೀಶರು ತಮ್ಮ ಈ ಒಂದು ತೀರ್ಪಿಗೆ ಕಾರಣ ಹೇಳಿದ್ದಾರೆ. ಯಾರ ಮೇಲಿನ ದ್ವೇಷದಿಂದಾಗಲಿ, ಚುನಾಯಿತ ಪ್ರತಿನಿಧಿಗಳಿಗೆ ಅಗೌರವ ತರಲೆಂದಾಗಲಿ ಅಥವಾ ಶಾಸನ ಸಭೆಗೆ ಅಗೌರವ ತರಲಾಗಲಿ ನಾವು ಇದನ್ನು ಮಾಡಿಲ್ಲ. ಇಲ್ಲಿ ರಾಜಕಾರಣಿಗಳಿಗೆ ಅಥವಾ ಚುನಾಯಿತ ಪ್ರತಿನಿಧಿಗಳಿಗೇನು ಮಿತಿ ಹಾಕಿದ್ದೇವೋ ಹಾಗೆಯೇ ನ್ಯಾಯಾಧೀಶರಿಗೂ ಮಿತಿ ಹಾಕಿದ್ದೇವೆ. ಒಂದೊಂದು ಕೋರ್ಟ್ ಓಪನಿಂಗ್‌ನಲ್ಲಿ 6-8 ನ್ಯಾಯಾಧೀಶರು ಬಂದದ್ದುಂಟು. ಅದು ಏಪರೀತ ಆಸಹ್ಯವಿದ್ದುದ್ದರಿಂದ ಎಲ್ಲಾ ಸರಿಯಾಗಿ ನಡೆಯಲಿ ಎಂಬ ದೃಷ್ಟಿ ಇಟ್ಟುಕೊಂಡು ನ್ಯಾಯಾಧೀಶರಿಗೆ ನೀವು ಒಬ್ಬರೇ ಹೋಗಬೇಕೆಂದು ಹೇಳಿದ್ದೇವೆ. ಸಂಬಂಧಪಟ್ಟ ಮಂತ್ರಿಗಳು ಮತ್ತು ಡಿಸ್ಟ್ರಿಕ್ಟ್ ಮಂತ್ರಿಗಳು ಹೋಗಬೇಕೆಂದು ಹೇಳಿದ್ದೇವೆ. ವಿರೋಧಪಕ್ಷದ ನಾಯಕರನ್ನು ಸಹ ಅದರಲ್ಲಿ ಸೇರಿಸಬೇಕಾಗಿತ್ತು, ಅದನ್ನು ಸೇರಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ.